ಅರ್ಜಿಗಳಿಗೆ ಎಷ್ಟು ದಿವಸಗಳೊಳಗೆವಿಲೇವಾರಿ ಮಾಡುವುದಕ್ಕೆ ನಿಮ್ಮ ಆಫೀಸರ್‌ಗಳಿಗೆ ಇನ್‌ಸ್ಟ್ರಕ್ಷನ್ ಕೊಡುತ್ತೀರಾ ? ೩ ತಿಂಗಳೋ ೬ ತಿಂಗಳೋ ೧ ವರ್ಷವೋ ಎಷ್ಟು ದಿವಸಗಳೊಳಗೆ ನಿಖಾಲೆ ಮಾಡಬೇಕೆಂದು ನಿಮ್ಮ ಅಧಿಕಾರಿಗಳಿಗೆ ನಿರ್ದಾಕ್ಷಿಣ್ಯವಾಗಿ ಆದೇಶವನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸುಪ್ರೀಂಕೋರ್ಟಿನ ತೀರ್ಮಾನದ ಕಾಪಿ ನನಗೆ ಇನ್ನೂ ಬಂದಿಲ್ಲ. ಅದರ ನಕಲು ಪ್ರತಿ ಬಂದಮೇಲೆ, ಅದರ ಬಗ್ಗೆ ಪೂರ್ಣವಾಗಿ ಅಭ್ಯಾಸಮಾಡಿ ಅದರ ಮಹತ್ವ ಏನಿದೆ ಎಂದು ತಿಳಿದುಕೊಂಡು ಅದರಂತೆ ನಡೆದು ಕೊಳ್ಳುತ್ತೇನೆ. ಏಕೆಂದರೆ ಸುಪ್ರೀಂ ಕೋರ್ಟಿನ ತೀರ್ಮಾನದ ವಿರುದ್ಧ ಯಾರೂ ನಡೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪೆಚ್. ಪಾಟೀಲ್ —ಅಧ್ಯಕ್ಷರೇ ಸುಪ್ರೀಂ ಕೋರ್ಟಿನಲ್ಲಿ ನಿಮ್ಮ ವಕೀಲರೂ ಕೂಡ ಹಾಜರಿರುತ್ತಾರೆ. ಅಲ್ಲಿ ಈ ಬಗ್ಗೆ ಒಂದು ನಿರ್ಣಯ ಆದಕೂಡಲೇ ಅದರ ನಕಲು ಪ್ರತಿಗಳನ್ನಾದರೂ ಕಳುಹಿಸಿಕೊಡಬೇಕಾಗಿತ್ತು. ಅದು ಅವರ ಕರ್ತವ್ಯವಾಗಿತ್ತು. ಅವರುಗಳು ಸೂಕ್ತ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲವೇ ? ಸರಿಯಾಗಿ ಕೆಲಸ ನಿರ್ವಹಣೆ ಮಾಡದಿದ್ದಲ್ಲಿ ಆ ಬಗ್ಗೆ ಸೂಕ್ತ ಕ್ರಮವನ್ನು ತಾವುಗಳು ತೆಗೆದುಕೊಳ್ಳಬೇಕು. ಒಂದು ಸರಿಯಾದ ವ್ಯವಸ್ಥೆ ಆಗಬೇಕು.

ಅಧ್ಯಕ್ಷರು.—ಪ್ರಶ್ನೆ ಕ್ರಮಾಂಕ, ೧೭೦—ತಡೆಹಿಡಿಯಲಾಗಿದೆ.

ಪ್ರಶ್ನೆ ಕ್ರಮಾಂಕ. ೧೭೧—ತಡೆಹಿಡಿಯಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ, ಈ ತಡೆಹಿಡಿಯಲಾದ ಪ್ರಶ್ನೆಗಳಿಗೆ ಯಾವಾಗ ಉತ್ತರ ಕೊಡುತ್ತಾರೆ ಎಂದು ತಿಳಿಸಬೇಕು.

ಶ್ರೀ ಶಿವಾನಂದ ಕೌಜಲಗಿ.—ಹಿಟ್ಟಣಗಿ ಗ್ರಾಮದಲ್ಲಿ ೧೦ ಸಾವಿರ ಜನಸಂಖ್ಯೆ ಇದೆ. ಇನ್ನೂ ಆ ಗ್ರಾಮಕ್ಕೆ ಟ್ರಕ್‌ನಲ್ಲಿ ನೀರನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು.—ನಜೀರ್‌ಸಾಬ್‌ರವರೇ, ಆ ಪ್ರಶ್ನೆಯನ್ನು ಯಾವ ಕಾರಣಕ್ಕೆ ತಡೆಹಿಡಿದಿದ್ದೀರಿ ಎಂದು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್. —ಅಧ್ಯಕ್ಷರೇ, ಜಿಲ್ಲೆಯ ಎಲ್ಲಾ ಮೂಲಗಳಿಂದ ಆ ಬಗ್ಗೆ ವಿವರಗಳು ಬರಬೇಕಾಗಿದೆ. ಮುಂದಿನ ವಾರದಲ್ಲಿ ವಿವರಗಳನ್ನು ಪಡೆದು ಉತ್ತರಿಸುತ್ತೇನೆ.

ಅಧ್ಯಕ್ಷರು.—ಮುಂದಿನ ವಾರದಲ್ಲಿ ಉತ್ತರ ಕೊಡುತ್ತಾರೆ.

ಬೆಂಗಳೂರಿನ ನಗರದಲ್ಲಿ ಕೊರೆದಿರುವ ಕೊಳವೆ ಬಾವಿಗಳ ಬಗ್ಗೆ

೧೭೨ (೪೬೧) ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ಪೌರಾಡಳಿತ ಕಾನೂನು, ಸಂಸದೀಯ, ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರದಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ? (ಕ್ಷೇತ್ರವಾರು ಅಂಕಿ ಗಳನ್ನು ಕೊಡತಕ್ಕದ್ದು).

ಆ) ಅದರಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಆ) ೧,೪೧೪

ವಿಧಾನಸಭಾ ಕ್ಷೇತ್ರವಾರು ಕೊರೆದಿರುವ ಕೊಳವೆ ಬಾವಿಗಳ ವಿವರಗಳು ಕೆಳಕಂಡಂತಿವೆ :—

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರ	ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ
೧	ಬಸವನಗುಡಿ	೧೦೯
೨	ಮಲ್ಲೇಶ್ವರಂ	೧೭೦
೩	ಚಿಕ್ಕಪೇಟೆ	೩೬
೪	ಜಯನಗರ	೧೪೦
೫	ಗಾಂಧೀ ನಗರ	೯೧
೬	ರಾಜಾಜಿನಗರ	೨೬೫
೭	ಬಿನ್ನಿಪೇಟೆ	೧೮೫
೮	ಚಾಮರಾಜಪೇಟೆ	೫೭
೯	ಭಾರತೀನಗರ	೭೯
೧೦	ಶಾಂತಿನಗರ	೪೦
೧೧	ಶಿವಾಜಿನಗರ	೩೨
೧೨	ಜಯಮಹಲ್	೯೧
೧೩	ಯಲಹಂಕ	೩
೧೪	ಪರ್ತೂರು	೩೯
೧೫	ಉತ್ತರಹಳ್ಳಿ	೭೭
	ಒಟ್ಟು	೧.೪೧೪

ಆ) ೧೨೩.

ಶ್ರೀ ಕೆ. ಜೆ. ಜಾರ್ಜ್.—ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ೧,೪೧೪ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಈ ಬಾವಿಗಳನ್ನು ಕೊರೆಯಲು ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ? ಮತ್ತು ಬಾವಿಗಳನ್ನು ಕೊರೆಯುವ ಕಂಟ್ರಾಕ್ಟರ್ಸ್‌ಗೆ ಎಷ್ಟು ಹಣವನ್ನು ಇನ್ನೂ ಕೊಡಬೇಕಾಗಿದೆ ? ಹಣದ ಅಭಾವದಿಂದಾಗಿ ಕೊಳವೆ ಬಾವಿಗಳನ್ನು ಕೊರೆಯುವ ಕೆಲಸವನ್ನು ನಿಲ್ಲಿಸಿದ್ದೀರಾ ? ಹಿಂದೆ ಪ್ರಧಾನಿಯವರು ಬೆಂಗಳೂರಿಗೆ ಭೇಟಿ ಕೊಟ್ಟಾಗ ಬೆಂಗಳೂರಿನ ಕೊಳಚೆ ಪ್ರದೇಶಗಳಿಗೆ ಕೊಳವೆ ಬಾವಿಗಳನ್ನು ಒದಗಿಸಲು ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದರು. ಅವರು ಕೊಟ್ಟ ಹಣ ಎಷ್ಟು ಎಂದು ದಯವಿಟ್ಟು ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕೊಳವೆ ಬಾವಿಗಳನ್ನು ಕೊರೆಯಲು ಒಟ್ಟು ೨೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಈ ಕೊಳಚೆ ಪ್ರದೇಶಗಳಲ್ಲಿ ಅದಕ್ಕೋಸ್ಕರವಾಗಿ ಖರ್ಚು ಮಾಡಿದ್ದೇವೆ. ಆ ೨೦ ಲಕ್ಷ ರೂಪಾಯಿಗಳಲ್ಲಿ ಬೆಂಗಳೂರು ನಗರ ಮಾತ್ರ ಅಲ್ಲದೇ ಇತರ ನಗರಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಖರ್ಚು ಮಾಡಿದ್ದೇವೆ. ಆ ೨೦ ಲಕ್ಷ ರೂಪಾಯಿಗಳು ಕೊಳಚೆ ಪ್ರದೇಶಗಳ ಬಾವಿಗಳಿಗೆಂದು ನಿಗದಿ ಮಾಡಿದ್ದು ಅದನ್ನು ಖರ್ಚು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಪ್ರಧಾನಿಯವರು ಬೆಂಗಳೂರಿಗೆ ಬಂದಾಗ ಈ ಉದ್ದೇಶಕ್ಕಾಗಿ ೨ ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಅದು ಬಂದಿದೆಯೇ ? ಅಥವಾ ಕೇವಲ ೨೦ ಲಕ್ಷ ರೂಪಾಯಿಗಳನ್ನು ಮಾತ್ರವೇ ಕೊಟ್ಟಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಡ್ರಾಟ್ ರಿಲೀಫ್‌ಗೆ ಎಂದು ಕೊಟ್ಟಿದ್ದಾರೆ. ಆದರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಬಾವಿಗಳಿಗಾಗಿ ಖರ್ಚು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಪ್ರಧಾನಿಯವರು ಡ್ರಾಟ್ ರಿಲೀಫ್‌ಗೆ ಎಂದು ಕೊಟ್ಟು ಎಷ್ಟು ಕೊಳವೆ ಬಾವಿಗಳಿಗಾಗಿ ಖರ್ಚು ಮಾಡಿ ಎಂದು ಹೇಳಿದ್ದಾರೆ, ೨೦ ಲಕ್ಷ ಮಾತ್ರವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯರು ಹೇಳಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಕೊಳೆಚೆ ಪ್ರದೇಶಗಳಲ್ಲಿ ಬಾವಿಗಳನ್ನು ಕೊರೆಯಲು ಖರ್ಚು ಮಾಡಿದ್ದೇವೆ. ಅದು ೨೦ ಲಕ್ಷ ರೂಪಾಯಿಗಳು. ಅದರ ಜೊತೆಗೆ ಬೇರೆ ಹಣವನ್ನು ಕೂಡ ಖರ್ಚು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಬೋರ್‌ವೆಲ್ ತೆಗೆಯುವುದನ್ನು ಸ್ಟಾಪ್ ಮಾಡಿಬಿಟ್ಟಿದ್ದಾರೆ. ಸರ್ಕಾರ ದವರು ಈಗ ಮತ್ತೆ ಹಣ ಕೊಟ್ಟು ಬೋರ್‌ವೆಲ್ ಕೊರೆತವನ್ನು ಶುರು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಶಾಸಕರನ್ನು ಕೇಳಿಯೇ ನಾವು ಬೋರ್‌ವೆಲ್‌ಗಳ ಸಂಖ್ಯೆ ನಿರ್ಧರಿಸಿರುವುದು. —ಈಗ ಮತ್ತೆ ಬೇಕೆನಿಸಿದರೆ ಅವರು ಪಟ್ಟಿ ಕೊಡಲಿ ಮಾಡಿಸೋಣ.

ಧಾರವಾಡ ಹುಬ್ಬಳ್ಳಿ ಮಹಾನಗರದಲ್ಲಿ ನಿವೇಶನಗಳ ಹಂಚಿಕೆಯ ಬಗ್ಗೆ

೧೭೩. (೪೬೯ ಸಿ) ಶ್ರೀಮಾನ್ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ, ಆಹಾರ ಮತ್ತು ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ಹುಬ್ಬಳ್ಳಿ ಮಹಾ ನಗರಸಭೆಯ ಸರಹದ್ದಿನಲ್ಲಿ ನಗರಾಭಿವೃದ್ಧಿ ಸಮಿತಿಯಿಂದ ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು?

ಆ) ನಿವೇಶನಗಳ ಹಂಚಿಕೆಯಲ್ಲಿ ಅನುಸರಿಸುತ್ತಿರುವ ವಿಧಾನಗಳು ಯಾವುವು ?

ಇ) ಧಾರವಾಡ-ಹುಬ್ಬಳ್ಳಿ ಮಹಾ ನಗರಸಭೆಯ ಸರಹದ್ದಿನಲ್ಲಿ ಬೇಕಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ಹಾಗೂ ಅದರ ಬಗ್ಗೆ ಸರಕಾರದವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ, ಆಹಾರ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೯೮೫-೮೬ ೧೨೮
೧೯೮೬-೮೭ ೧೬೨
೧೯೮೭-೮೮ ೪೧೩

ಆ) ಕರ್ನಾಟಕ ನಗರಾಭಿವೃದ್ಧಿ ಮಂಡಳಿಗಳ ನಿಯಮಾವಳಿಗಳು ೧೯೭೬ರ ಆಧಾರದ ಮೇಲೆ.

ಇ) ಸುಮಾರು ೧೦,೦೦೦ ನಿವೇಶನಗಳನ್ನು ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಸದ್ಯದಲ್ಲಿ ಒದಗಿಸುವ ಅಗತ್ಯ ಇದೆ ಎಂದು ಅಂದಾಜು ಮಾಡಲಾಗಿದೆ.

ಈ ಬಗ್ಗೆ ಯೋಜನೆಗಳನ್ನು ತಯಾರು ಮಾಡುವ ಕೆಲಸ ಅಭಿವೃದ್ಧಿ ಮಂಡಳಿಯದು. ಅವರೂ ಹುಬ್ಬಳ್ಳಿ ತಾಲ್ಲೂಕ ರಾಯನಾಳ ಗ್ರಾಮದ ಆ.ಸ.ಸಂ. ೮೮ : ೧ ರಲ್ಲಿ ೧೪೧ ಎ-೧೦ ಗುಂ. ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಚಂದ್ರಕಾಂತ ಬೆಲ್ಲದ.—ಅಧ್ಯಕ್ಷರೇ, ನಿವೇಶನಗಳ ಹಂಚಿಕೆಯಲ್ಲಿ ಯಾವ ವಿಧಾನವನ್ನು ಇವರು ಅನುಸರಿಸಿದ್ದಾರೆ ? ಧಾರವಾಡ ನಗರದಲ್ಲಿ ನಿವೇಶ ಹಂಚಿಕೆಗೆಂದು ಈಗಾಗಲೇ ಯಾವ ಯಾವ ಬಡಾವಣೆಗಾದರೂ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿದೆಯೇ ? ಮತ್ತು ಇಲ್ಲಿಯವರೆಗೆ ಎಷ್ಟು ನಿವೇಶನಗಳನ್ನು ಧಾರವಾಡದಲ್ಲಿ ಹಂಚಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಧಾರವಾಡದ ಡಿಮಿಯಾಂಡ್ ಸರ್ವೆ ಮಾಡಿಸಿ ಅದರ ಆಧಾರದ ಮೇಲೆ ನಿವೇಶನ ಕೊಟ್ಟಿದ್ದೇವೆ. ಅದು ಸಾಲದೆಂದು ಕಂಡು ಬಂದು ಮತ್ತೆ ೧೦ ಸಾವಿರ ನಿವೇಶನ ಹಂಚಲು ಮತ್ತೆ ಜಮೀನು ಪಡೆಯುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎನ್ನುವುದನ್ನು ಉತ್ತರದಲ್ಲಿ